# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಮಂಗಳವಾರ, ದಿನಾಂಕ:20ನೇ ಆಗಸ್ಟ್, 2024

ಸಂಖ್ಯೆ:44

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು/ಮಾಜಿ ಶಾಸಕರುಗಳ ಸೇವೆಯ ಅನುಕೂಲತೆಯ ದೃಷ್ಟಿಯಿಂದ ವಿಧಾನ ಪರಿಷತ್ತಿನ ಶಾಸಕರ ಭವನದಲ್ಲಿ ವಾಹನ/ಅತಿಥಿ ಕೊಠಡಿ ಸೌಲಭ್ಯಗಳ ವ್ಯವಸ್ಥೆ ಮಾಡಲಾಗಿದ್ದು ಇತ್ತೀಚೆಗೆ ಮಾನ್ಯ ಶಾಸಕರುಗಳ ಹಾಗೂ ಮಾಜಿ ಶಾಸಕರುಗಳ ಹೆಸರಿನಲ್ಲಿ ಸದರಿ ಸೌಲಭ್ಯಗಳ ದುರ್ಬಳಕೆ ಆಗುತ್ತಿರುವ ಬಗ್ಗೆ ಮಾನ್ಯ ಸಭಾಪತಿಯವರಿಗೆ ದೂರುಗಳ ಬಂದಿರುವ ಹಿನ್ನಲೆಯಲ್ಲಿ ಸದರಿ ಸೌಲಭ್ಯಗಳ ಸಮರ್ಪಕ ಬಳಕೆ ದೃಷ್ಟಿಯಿಂದ ಇನ್ನು ಮುಂದೆ ಎಲ್ಲಾ ಮಾನ್ಯ ಶಾಸಕರುಗಳು/ಮಾಜಿ ಶಾಸಕರುಗಳು ತಮಗೆ ವಾಹನ ಸೌಲಭ್ಯ ಪಡೆಯುವ ಸಂದರ್ಭದಲ್ಲಿ ನೇರವಾಗಿ ಸ್ವಾಗತಕಾರರ ಕೊಠಡಿಗೆ ದೂರವಾಣಿ ಕರೆ ಮಾಡುವುದರ ಮೂಲಕ ಕೋರಿಕೆ ಸಲ್ಲಿಸಿದ ಬಳಿಕ ಕರ್ತವ್ಯ ಸರದಿಯಲ್ಲಿರುವ ವಾಹನ ಚಾಲಕರನ್ನು ಕಳುಹಿಸಿಕೊಡಲಾಗುವುದು ಹಾಗೂ ಅತಿಥಿ ಕೊಠಡಿ ಪಡೆಯುವ ಸಂಬಂಧ ದೂರವಾಣಿ ಮೂಲಕ ಅಥವಾ ಪತ್ರ ನೀಡುವುದರ ಮೂಲಕ ಕೋರಿಕೆ ಸಲ್ಲಿಸಿದ್ದಲ್ಲಿ ಸದರಿ ಸೌಲಭ್ಯದ ವ್ಯವಸ್ಥೆ ಮಾಡಲಾಗುವುದು ಎಂದು ಈ ಮೂಲಕ ಎಲ್ಲಾ ಮಾನ್ಯ ಶಾಸಕರು/ಮಾಜಿ ಶಾಸಕರುಗಳ ಗಮನಕ್ಕೆ ತರಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರು/ಮಾಜಿ ಶಾಸಕರುಗಳ ಮಾಹಿತಿಗಾಗಿ.

www.kla.kar.nic.in/council.htm